# ಡೀಚ್ ಎಂಬ ಬುದ್ಧಿವಂತನೂ ಜಗಜ್ಜಾಣ ಇಲಿಯೂ...



ಜಾಣ ಇಲಿ ಜೆರ್ರಿ. ಅದರ ಹುನ್ನಾರಕ್ಕೆ ಸಿಲುಕಿ ಹೈರಾಣಾಗುವ ದಡ್ಡ ಬೆಕ್ಕು ಟಾಮ್. ಇವೆರಡೂ ಅನಿಮೇಟೆಡ್ ಪಾತ್ರಗಳ ಪರಿಚಯವಿಲ್ಲದ ಜಗತ್ತಿನ ಜನರೇ ವಿರಳ ಎನ್ನಬೇಕು. ಅಂಥ ಜನಪ್ರಿಯತೆಯನ್ನು ಅನಿಮೇಟೆಡ್ ಪಾತ್ರಗಳ ಮೂಲಕ ಸಂಪಾದಿಸಿದ, ತಾನು ಅನುಭವಿಸಿದ ಮನೋಯಾತನೆಯನ್ನು ಉತ್ಪ್ರೇಕ್ಷೆ ಮಾಡಿ, ಭಾವಾತಿರೇಕದ ಯಶಸ್ವಿ ಅನಿಮೇಟೆಡ್ ಪಾತ್ರಗಳನ್ನು ಸೃಷ್ಟಿಸಿದ ಜೀನ್ ಡೀಚ್ ಏಪ್ರಿಲ್ 16ರಂದು ಕೊನೆಯುಸಿರೆಳೆದರು. ಅವರ ವೃತ್ತಿಬದುಕಿನ ಪುಟಗಳು ಕುತೂಹಲಕಾರಿಯಾಗಿವೆ.

■ ವಿಶಾಖ ಎನ್.

**1955**ರಲ್ಲಿ ಅನಿಮೇಟೆಡ್ ಸ್ಟುಡಿಯೊ 'ಯುನೈಟೆಡ್ ಪ್ರೊಡಕ್ಷನ್ಸ್ ಆಫ್ ಅಮೆರಿಕ' (ಯುಪಿಎ)ಗೆ ಅಪ್ರೆಂಟಿಸ್ ಆಗಿ ಸೇರಿಕೊಂಡಾಗ ಜೀನ್ ಡೀಚ್ ಮೂವತ್ತು ದಾಟಿದ್ದ ಯುವಕ. ಅಲ್ಲಿ ಕಲಿಯುವ ಮೊದಲೇ ಅವರ ಬದುಕು ನಾಟಕೀಯ ತಿರುವುಗಳನ್ನು ಎದುರಿಸಿತ್ತು. 'ನಾರ್ತ್ ಅಮೆರಿಕನ್ ಏವಿಯೇಷನ್'ನಲ್ಲಿ ಏರ್ ಕ್ರಾಫ್ಟ್‌ಗಳ ಬ್ಲೂಪ್ರಿಂಟ್ ಮಾಡಿಕೊಡುವ ಕೆಲಸದಲ್ಲಿ ತೊಡಗಿದ್ದ ಅವರು ಇನ್ನೇನು ಪೈಲಟ್ ತರಬೇತಿ ಮುಗಿಸಬೇಕು ಎನ್ನುವಷ್ಟರಲ್ಲಿ ನ್ಯುಮೋನಿಯಾ ಕಾಡಿತ್ತು. ಅಂಥ ಅನಾರೋಗ್ಯ ಸಮಸ್ಯೆ ಇರುವವರನ್ನು ಪೈಲಟ್ ಮಾಡಲಾಗದು. ಅದಕ್ಕೇ ನಾರ್ತ್ ಅಮೆರಿಕನ್ ಏವಿಯೇಷನ್ ಸಂಸ್ಥೆ ಅವರನ್ನು ಗೌರವಯುತವಾಗಿ ಕಳುಹಿಸಿಕೊಟ್ಟಿತು.

ಗೆರೆಗಳಿಗೂ ಜೀನ್ ಡೀಚ್ ಅವರಿಗೂ ಅವಿನಾಭಾವ ಸಂಬಂಧ. ಅದಕ್ಕೇ 'ದಿ ರೆಕಾರ್ಡ್ ಚೇಂಜರ್' ಎಂಬ ಜಾಝ್ ಮ್ಯಾಗಜೀನ್‌ಗೆ ಮುಖಪುಟ ಹಾಗೂ ಒಳಪುಟಗಳನ್ನು ವಿನ್ಯಾಸ ಮಾಡಿಕೊಟ್ಟಿದ್ದಲ್ಲದೆ, ಕೆಲವು ಚಿತ್ರಗಳನ್ನೂ ಬಿಡಿಸಿಕೊಟ್ಟರು. ಅನಿಮೇಟೆಡ್ ಸ್ಟುಡಿಯೊಗೆ ಅಪ್ರೆಂಟಿಸ್ ಆಗಿ ಸೇರಿದ್ದು ಇದರ ವಿಸ್ತೃತ ಆಸಕ್ತಿ. ಅಲ್ಲಿ ಕಲಿತ ಮೇಲೆ 'ಟೆರ್ರಿಟೂನ್ಸ್'ನ ಕ್ರಿಯೇಟಿವ್ ಡೈರೆಕ್ಟರ್ ಹುದ್ದೆ ಅವರನ್ನು ಹುಡುಕಿಕೊಂಡು ಬಂತು. 'ಸಿಡ್ನಿ ದಿ ಎಲಿಫೆಂಟ್', 'ಗ್ಯಾಸ್ಟನ್ ಲೇ ಕ್ರಯಾನ್', 'ಟಾಮ್ ಟೆರಿಫಿಕ್', 'ಕ್ಲಿಂಟ್ ಕ್ಲಾಬರ್' ತರಹದ ಪಾತ್ರಗಳನ್ನು ಮೊದಲು ಜೀನ್ ಡೀಚ್ ಸೃಷ್ಟಿಸಿದರು. 'ದಿ ರಿಯಲ್ ಗ್ರೇಟ್ ಅಡ್ವೆಂಚರ್ಸ್ ಆಫ್ ಟೆರಿಬಲ್ ಥಾಮ್ಸನ್' ಎಂಬ ಯುನೈಟೆಡ್ ಫೀಚರ್ ಸಿಂಡಿಕೇಟ್ ಕಾಮಿಕ್ ಸ್ಟ್ರಿಪ್ ಅನ್ನು ಯುಪಿಎನಲ್ಲಿ ಕಲಿಯುತ್ತಿದ್ದ ಕಾಲಘಟ್ಟದಲ್ಲೇ ಡೀಚ್ ಸಿದ್ಧಪಡಿಸಿದ್ದರು.

ಧೈರ್ಯಶಾಲಿ ಪುಟಾಣಿಯೊಬ್ಬನನ್ನು ಸಾಹಸಿಯಾಗಿಸಿ 'ಹೀರೊ ಆಫ್ ಹಿಸ್ಟರಿ' ಎಂಬ ಇನ್ನೊಂದು ಸ್ಟ್ರಿಪ್ ಸಿದ್ಧಪಡಿಸಿದರು. ಮಕ್ಕಳನ್ನು ಸಾಹಸ ಕಥಾನಕಗಳ ಮೂಲಕ ಹೇಗೆ ಹಿಡಿದಿಡಬಹುದು ಎಂಬ ಅವರ ಪ್ರಯೋಗಶಾಲೆಯ ಮೊದಲ ಪ್ರಯತ್ನಗಳು ಇವು. ಕಲಾವಿದ ಆರ್ಟ್ ಕಾರ್ನಿ ಹಾಗೂ ಮಿಚ್ ಮಿಲ್ಲರ್ ಎಂಬ ಬ್ಯಾಂಡ್ ಲೀಡರ್ ಸೇರಿ ಥಾಮ್ಸನ್ ಸಾಹಸಗಳ ಸ್ಟ್ರಿಪ್ ಆಧರಿಸಿದ ಕಿರುಪ್ರಹಸನವನ್ನು 'ಲಿಟ್ಲ್ ಗೋಲ್ಡನ್ ರೆಕಾರ್ಡ್ಸ್' ಎಂಬ ಸಂಸ್ಥೆಗೆ ರೂಪಾಂತರ ಮಾಡಿಕೊಟ್ಟರು. ಕಾಮಿಕ್ ಸ್ಟ್ರಿಪ್ ಒಂದು ವಿಡಿಯೊ ರೂಪ ತಳೆಯುವಷ್ಟು ಜನಪ್ರಿಯವಾಗಿತ್ತೆನ್ನುವುದಕ್ಕೆ ಇದೇ ಸಾಕ್ಷಿ. 1955ರ ಅಕ್ಟೋಬರ್ 16ರಿಂದ 1956ರ ಏಪ್ರಿಲ್ 14ರ ವರೆಗೆ ಪ್ರಕಟವಾದ ಕಾಮಿಕ್ ಸ್ಟ್ರಿಪ್ ಆಮೇಲಾಮೇಲೆ ಎಷ್ಟು ಜನಪ್ರಿಯವಾಯಿತೆಂದರೆ, 'ಸಿಡ್ನೀಸ್ ಫ್ಯಾಮಿಲಿ ಟ್ರೀ' ಎಂಬ ಥಿಯೇಟ್ರಿಕಲ್ ಕಾರ್ಟೂನ್ ಅಕಾಡೆಮಿ ಪ್ರಶಸ್ತಿಗೆ ನಾಮನಿರ್ದೇಶಿತವಾಯಿತು. 1958ರಲ್ಲಿ 'ಟೆರ್ರಿಟೂನ್ಸ್' ಸಂಸ್ಥೆಯು ಡೀಚ್ ಅವರನ್ನು ಕೆಲಸದಿಂದ ತೆಗೆದುಹಾಕಿತು. 'ಜೀನ್ ಡೀಚ್ ಅಸೋಸಿಯೇಟ್ಸ್' ಎಂಬ ತನ್ನದೇ ಸ್ಟುಡಿಯೊವನ್ನು ನ್ಯೂಯಾರ್ಕ್‌ನಲ್ಲಿ ಸ್ಥಾಪಿಸಲು ಇದೇ ಬೀಜಮಂತ್ರವಾದದ್ದು ವಿಶೇಷ.

ಮೊದ ಮೊದಲು ಈ ಸ್ಟುಡಿಯೊ ಟಿ.ವಿ. ಜಾಹೀರಾತುಗಳನ್ನು ರೂಪಿಸಿತು. 'ರಾಂಬ್ರ್ಯಾಂಡ್

